**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ ಸಿ ಸಂಃ 3731/2021**

| | | |
|---|---|---|
| ಸಾಕ್ಷಿಯ ಹೆಸರುಃ | ಸುಧಾರಾಣಿ | ಫ್ರಾಸಾಃಃ 4 |
| ಗಂಡನ ಹೆಸರುಃ | ರಾಕೇಶ್ ಬಾಬು | ಚಾಸಾಃಃ 7 |
| ವಯಸ್ಸುಃ | 37 ವರ್ಷ | ಪ್ರಮಾಣೀಕರಿಸಿದ<br>ದಿಃ 10/03/2025 |
| ಉದ್ಯೋಗಃ | ಅಬಕಾರಿ ನಿರೀಕ್ಷಕರು, ಟಿ ನರಸೀಪುರ ವಲಯ | |
| ವಾಸ ಸ್ಥಳಃ | ಟಿ ನರಸೀಪುರ | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನಾನು ದಿಃ08/03/2021 ರಿಂದ ದಿಃ03/08/2023 ರವರೆಗೆ ಅಬಕಾರಿ ನಿರೀಕ್ಷಕರಾಗಿ, ಉಪ ಅಧೀಕ್ಷಕರ ಕಚೇರಿ, ಹುಣಸೂರು ಉಪವಿಭಾಗದಲ್ಲಿ ಕರ್ತವ್ಯವನ್ನು ನಿರ್ವಹಿರುತ್ತೇನೆ.

2. ದಿಃ28/09/2021 ರಂದು ಬೆಳಿಗ್ಗೆ 6.30 ಗಂಟೆ ಸಮಯದಲ್ಲಿ ನಾನು ಮತ್ತು ನಮ್ಮ ಸಿಬ್ಬಂದಿಗಳಾದ ಚಾಸಾ-3 ರಿಂದ 6 ರವರ ಜೊತೆ ಇಲಾಖಾ ವಾಹನ ಸಂಃ ಕೆಎ-45-ಜಿ-107 ರಲ್ಲಿ ಮಾಕೋಡು ಗ್ರಾಮದ ಸರ್ಕಲ್ ಬಳಿ ಇದ್ದಾಗ, ಮಾಹಿತಿ ಬಂದಿದ್ದು, ಅಲ್ಲಿದ್ದ ಇಬ್ಬರು ಪಂಚರನ್ನು ಕರೆದು ನಮ್ಮ ಪರಿಚಯ ಮಾಡಿಕೊಂಡು ಸಾಕ್ಷಿದಾರರಾಗಿ ಸಹಕರಿಸಿ ಎಂದು ಕೋರಿದಾಗ ಚಾಸಾ-1 ಮತ್ತು 2 ರವರು ಒಪ್ಪಿ ಮುಂದೆ ಬಂದಿರುತ್ತಾರೆ. ನಂತರ ಅವರಿಗೆ ನೋಟೀಸು ನೀಡಿ, ಪಂಚರ ಸಮಕ್ಷಮ ನಾವುಗಳು ಸದರಿ ಗ್ರಾಮದ ಸರ್ಕಲ್ ಬಳಿ ರಸ್ತೆಗಾವಲು ನಡೆಸುತ್ತಿದ್ದಾಗ, ರಾವಂದೂರು ಗ್ರಾಮದ ರಸ್ತೆಕಡೆಯಿಂದ ಒಂದು ದ್ವಿಚಕ್ರ ವಾಹನ ಬರುತ್ತಿತ್ತು. ಅನುಮಾನದ ಮೇರೆಗೆ ನಾವು ಅದನ್ನು ತಡೆದು ನಿಲ್ಲಿಸಿದಾಗ ಒಬ್ಬ ಆಸಾಮಿ ತನ್ನ ವಾಹನವನ್ನು ಬಿಟ್ಟು ಓಡಿಹೋಗಲು ಪ್ರಯತ್ನಿಸಿರುತ್ತಾರೆ. ನಾವುಗಳು ಬೆನ್ನಟ್ಟಿ ಹಿಡಿದು ಕರೆತಂದು, ವಾಹನದ

ಬಳಿ ಬಂದು ನೋಡಿದಾಗ ವಾಹನದ ಮಧ್ಯ ಭಾಗದಲ್ಲಿ ಎರಡು ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡುಬಂದಿರುತ್ತದೆ. ನಂತರ ವಾಹನ ಮತ್ತು ಸದರಿ ಪೆಟ್ಟಿಗೆಗಳನ್ನು ಪರಿಶೀಲಿಸಲು ಘನ ನ್ಯಾಯಾಲಯದಿಂದ ಶೋದನಾ ವಾರೆಂಟ್ ಪಡೆಯಲು ಕಾಲವಾಕಾಶ ಇಲ್ಲದ ಕಾರಣ ಸ್ಥಳದಲ್ಲಿಯೇ ಕರ್ನಾಟಕ ಅಬಕಾರಿ ಕಾಯಿದೆ ಕಲಂ 1965 ಕಲಂ 54 ರಡಿಯಲ್ಲಿ ಶೋಧನಾ ಸಮುಚಿತ ಆಧಾರವನ್ನು ಸಿದ್ದಪಡಿಸಿ, ಅದಕ್ಕೆ ಪಂಚರ ಸಹಿಗಳನ್ನು ಪಡೆದೆವು. ನಂತರ ಪರಸ್ಪರ ಅಂಗಶೋದನೆ ಮಾಡಿಕೊಂಡು ಸದರಿ ವಾಹನವನ್ನು ಪರಿಶೀಲಿಸಿದಾಗ ಸದರಿ ವಾಹನ ಕಪ್ಪು ಮತ್ತು ಹಸಿರು ಬಣ್ಣಮಿಶ್ರಿತವಾಗಿದ್ದು, ಯಾವುದೇ ನೊಂದಣಿ ಸಂಖ್ಯೆ ಇರುವುದಿಲ್ಲ. ಸದರಿ ವಾಹನ ಟಿವಿಎಸ್ XL100 ಹೆವಿ ಡ್ಯೂಟಿ ದ್ವಿಚಕ್ರ ವಾಹನವಾಗಿರುತ್ತದೆ. ನಂತರ ಸದರಿ ವಾಹನದಲ್ಲಿದ್ದ ಎರಡು ರಟ್ಟಿನ ಪೆಟ್ಟಿಗೆಗಳನ್ನು ಪರಿಶೀಲಿಸಿದಾಗ ಅದರ ಮೇಲೆ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಎಂಬ ಹೆಸರಿರುವ ಎರಡು ರಟ್ಟಿನ ಪೆಟ್ಟಿಗೆಗಳಿದ್ದು, ಅವುಗಳನ್ನು ಕ್ರಮ ಸಂಃ1 ಮತ್ತು 2 ಎಂದು ನಮೂದಿಸಿಕೊಂಡಿರುತ್ತೇವೆ. ನಂತರ ಕ್ರ.ಸಂಃ1 ರ ಪೆಟ್ಟಿಗೆಯನ್ನು ತೆರೆದು ನೋಡಿದಾಗ ಅದರಲ್ಲಿ 90 ಎಂ.ಎಲ್.ನ 96 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಮಧ್ಯದ ಟೆಟ್ರಾ ಪ್ಯಾಕೇಟ್‌ಗಳು ಇರುತ್ತವೆ. ಕ್ರ.ಸಂಃ 1 ರ ಬಾಕ್ಸ್ ನಂಬರ್ 149/200 ಆಗಿರುತ್ತದೆ. ನಂತರ ಕ್ರ.ಸಂಃ2 ರ ಬಾಕ್ಸನ್ನು ತೆಗೆದು ನೋಡಿದಾಗ ಅದರಲ್ಲಿಯೂ ಸಹ 90 ಎಂ.ಎಲ್.ನ 96 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟ್‌ಗಳು ಇರುವುದು ಕಂಡುಬಂದಿರುತ್ತದೆ. ಅದರ ಬಾಕ್ಸ್ ನಂ. 155/200 ಆಗಿರುತ್ತದೆ. ನಂತರ ಆಸಾಮಿಯನ್ನು ಈ ಮಧ್ಯವನ್ನು ಹೊಂದಲು ದಾಖಲಾತಿ ಮತ್ತು ರಹದಾರಿ ಇದೆಯೇ ಎಂದು ಕೇಳಲಾಗಿ ಇಲ್ಲವೆಂದು ನುಡಿದಿರುತ್ತಾರೆ. ನಂತರ ಸದರಿ ಆಸಾಮಿಗೆ ಯಾವುದೇ ಪರವಾನಿಗೆ ಇಲ್ಲದೇ ಸಾಗಾಟ ಮಾಡುವುದು ಕಾನೂನು ಉಲ್ಲಂಘನೆ ಎಂದು ತಿಳಿಸಿ, ನಂತರ ದೊರೆತ ಮುದ್ದೇಮಾಲುಗಳ ಪೈಕಿ ಪ್ರತಿ ರಟ್ಟಿನ ಪೆಟ್ಟಿಗೆಯಿಂದ 15 ರಂತೆ ಒಟ್ಟು 30 ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಒಂದು ಬಿಳಿಯ ಬಟ್ಟೆಯಿಂದ ಚೀಲವನ್ನು ತಯಾರಿಸಿ, 30 ಟೆಟ್ರಾ ಪ್ಯಾಕೇಟ್ ಗಳನ್ನು ತುಂಬಿಸಿ ದಾರದಿಂದ ಕಟ್ಟಿ ಸಮವಸ್ತ್ರದ ಬಟನ್ ನಿಂದ ಅರಗಿನ ಸೀಲನ್ನು ಹಾಕಿರುತ್ತೇವೆ. ಉಳಿದ ಟೆಟ್ರಾ ಪ್ಯಾಕೇಟ್ ಗಳನ್ನು ಸದರಿ ಬಾಕ್ಸ್ ಗಳಿಗೆ ತುಂಬಿ ಟೇಪ್‌ನಿಂದ ಸೀಲು ಮಾಡಿ ಬಿಳಿ ದಾರದಿಂದ ಕಟ್ಟಿ ಅರಗಿನಿಂದ ಸೀಲು ಮಾಡಿರುತ್ತೇವೆ. ನಂತರ ಮಾದರಿ ಚೀಟಿ ಮತ್ತು ಮಾದರಿ ಸೀಲಿನ ನಕಲನ್ನು ತಯಾರಿಸಿ, ವಿವರವನ್ನು ನಮೂದಿಸಿ, ಪಂಚರ ಸಹಿ ಪಡೆದು ಮಾದರಿ ಚೀಟಿಗಳನ್ನು ವಾಹನ ಮತ್ತು

ಮುದ್ದೇಮಾಲುಗಳಿಗೆ ಅಂಟಿಸಲಾಯಿತು. ನಂತರ ಎಲ್ಲಾ ಮುದ್ದೇಮಾಲುಗಳನ್ನು ಇಲಾಖಾ ವಶಕ್ಕೆ ಪಡೆದು ಸದರಿ ಆಸಾಮಿಯ ಹೆಸರು ವಿಳಾಸ ಕೇಳಲಾಗಿ ಆತನ ಹೆಸರು ರಾಜ ಬಿನ್ ಸಕಲಾರಾಧ್ಯ, 40 ವರ್ಷ, ಅರಳಹಳ್ಳಿ ಗ್ರಾಮಾ, ರಾವಂದೂರು ಹೋ, ಪಿರಿಯಾಪಟ್ಟಣ ತಾಲ್ಲೂಕು ಎಂದು ತಿಳಿಸಿರುತ್ತಾರೆ. ಸ್ಥಳ ಮಹಜರ್ ಕ್ರಮವನ್ನು ಬೆಳಿಗ್ಗೆ 6.30 ಗಂಟೆಯಿಂದ 7.45 ಗಂಟೆಯವರೆಗೆ ಜರುಗಿಸಲಾಯಿತು. ನಂತರ ಆಸಾಮಿಯನ್ನು ಮತ್ತು ಮಾಲುಗಳನ್ನು ಮುಂದಿನ ಕ್ರಮಕ್ಕೆ ಕಚೇರಿಗೆ ತರಲಾಯಿತು. ನಂತರ ನಾನು ನನ್ನ ಸ್ವ ವರದಿಯನ್ನು ತಯಾರಿಸಿ ಪ್ರಕರಣ ದಾಖಲಿಸಲಾಯಿತು. ನಂತರ ಮುಂದಿನ ತನಿಖೆಯನ್ನು ಚಾಸಾ-11 ರವರಿಗೆ ವಹಿಸಿರುತ್ತೇನೆ.

3. ಸಾಕ್ಷಿಯು ನಿಪಿ.1 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ.1(ಡಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.2 ಶೋಧನಾ ಸಮುಚಿತ ಆಧಾರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.3 ಮಾಲುಪಟ್ಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.3(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.4 ಮಾದರಿ ಸೀಲಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.4(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.7** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.7(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.8** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.8(ಎ)** ಎಂದು ಗುರುತಿಸಲಾಯಿತು.

4. ಆ ದಿನ ವಶಪಡಿಸಿಕೊಂಡ ಮಾಲುಗಳು ಈಗ ನ್ಯಾಯಾಲಯದ ಮುಂದಿರುತ್ತವೆ. 30 ಟೆಟ್ರಾ ಪ್ಯಾಕೇಟ್ ಗಳನ್ನು ಒಟ್ಟಾರೆಯಾಗಿ ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ. 2 ರಟ್ಟಿನ ಪೆಟ್ಟಿಗೆಳನ್ನು ಈಗಾಗಲೇ ಮು.ಮಾ.2 ಮತ್ತು 3 ಎಂದು ಗುರುತಿಸಲಾಗಿದೆ. ಆರೋಪಿತ ಈ ದಿನ ಗೈರುಹಾಜರಿದ್ದು, ಆರೋಪಿತನ ಗುರುತಿನ ಬಗ್ಗೆ ತಕರಾರು ಮಾಡಿರುವುದಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ.ಜಿ ವಕೀಲರಿಂದಃ**

5. ದಿಃ28/09/2021ರಂದು ಬೆಳಿಗ್ಗೆ 5.00 ಗಂಟೆಗೆ ಬಾತ್ಮಿ ಬಂದಿರುತ್ತದೆ. ಆ ಸಮಯದಲ್ಲಿ ನಾನು ಹುಣಸೂರು ಕೇಂದ್ರಸ್ಥಾನದಲ್ಲಿದ್ದೆ. ಆ ದಿನ ಗಸ್ತಿಗೆ ಎಷ್ಟು ಗಂಟೆಗೆ ಹೋದೆವು, ಯಾವ ಸ್ಥಳಕ್ಕೆ ಹೋದೆವು ಎಂದು ದಿನಚರಿಯಲ್ಲಿ ನಮೂದು ಮಾಡಿದ್ದೇನೆ, ಆದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾವು ಮಾರ್ಗದಲ್ಲಿ ಬರುವಾಗ ಯಾವುದೇ ವಾಹನಗಳನ್ನು ತಪಾಸಣೆ ಮಾಡಿಲ್ಲ. ನಾವು ಹುಣಸೂರಿನಿಂದ ಕಂಪಲಾಪುರ ಮಾರ್ಗವಾಗಿ ಮಾಕೋಡು ಗ್ರಾಮಕ್ಕೆ ತಲುಪಿದೆವು. ಕಂಪಲಾಪುರದಿಂದ ಮಾಕೋಡು ಗ್ರಾಮ ಎಷ್ಟು ಅಂತರ ಇದೆ ಎಂದು ಗೊತ್ತಿಲ್ಲ. ಕಂಪಲಾಪುರದಿಂದ ಮಾಕೋಡು ಗ್ರಾಮಕ್ಕೆ ಹೋಗಬೇಕಾದರೆ ರಾವಂದೂರು ಮುಖಾಂತರ ಹೋಗಬೇಕೋ ಇಲ್ಲವೋ ನೆನಪಿಲ್ಲ. ಈಗಲೂ ಮಾಕೋಡಿಗೆ ರಾವಂದೂರು ಮುಖಾಂತರ ಹೋಗಬೇಕೋ ಇಲ್ಲವೋ ಗೊತ್ತಿಲ್ಲ. ವಾಹನವು ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹೋಗುತ್ತಿತ್ತು ಎಂದು ಗೊತ್ತಿಲ್ಲ. ರಾವಂದೂರಿನಿಂದ ಮಾಕೋಡು ಗ್ರಾಮ ಯಾವ ದಿಕ್ಕಿಗೆ ಇದೆ ಎಂದು ತಿಳಿದುಕೊಂಡಿಲ್ಲ. ಆ ದಿನ ನಾನು ಸ್ಥಳಕ್ಕೆ ಹೋಗಿಲ್ಲ, ಆರೋಪಿತನನ್ನು ದಸ್ತಗಿರಿ ಮಾಡಿಲ್ಲ, ಯಾವುದೇ ಮಾಲನ್ನು ಅಮಾತನ್ನು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಪೋಟೋ ತೆಗೆದಿದ್ದೇವೆ, ತನಿಖಾಧಿಕಾರಿ ಹಾಜರುಪಡಿಸಿರಬಹುದು. ವಾಹನದ ಪೋಟೋ ಮತ್ತು ವಿಡೀಯೋ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ವಾಹನ ಯಾವ ಬಣ್ಣದ್ದು ಎಂದು ನಿಖರವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾಹನದ ಮೇಲೆ ಇದ್ದ ವಿಶೇಷ ಗುರುತುಗಳು ಗೊತ್ತಿಲ್ಲ. ಆರೋಪಿತನನ್ನು ಮದ್ಯವನ್ನು ಎಲ್ಲಿಂದ ಖರೀದಿಸಿದ್ದು ಎಂದು ವಿಚಾರಣೆ ಮಾಡಿಲ್ಲ. ಅಮಾನತ್ತುಪಡಿಸಿಕೊಂಡ ಮದ್ಯದ ಬ್ಯಾಚ್ ಸಂಖ್ಯೆಯನ್ನು ಮಹಜರ್ ನಲ್ಲಿ ಬರೆದಿದ್ದೇವೆ. ನಿಪಿ.1 ಮಹಜರಿಗೆ ಪಂಚರು ಮತ್ತು ಗಸ್ತಿನಲ್ಲಿದ್ದ ನಾವು ಸಹಿ ಮಾಡಿದ್ದೇವೆ. ಪಂಚರಿಗೆ ನೋಟೀಸನ್ನು ನೀಡಿದ್ದೆ. ಪಂಚರು ಯಾವ ಊರಿನವರು ಎಂದು ಗೊತ್ತು. ಚಾಸಾ-2 ರವರು ಎನ್.ಶೆಟ್ಟಹಳ್ಳಿ ಗ್ರಾಮದವರು. ಆಗ ಬೆಳಗಿನಜಾವ ಆದುದ್ದರಿಂದ ಸಾರ್ವಜನಿಕರು ಇರಲಿಲ್ಲ. ಎನ್.ಶೆಟ್ಟಹಳ್ಳಿ ಗ್ರಾಮಕ್ಕೂ ಮಾಕೋಡು ಗ್ರಾಮಕ್ಕೂ ಎಷ್ಟು ಅಂತರ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಗ್ರಾಮಗಳಿಗೆ 20 ಕಿ.ಮೀ ಅಂತರ ಇದೆ ಎಂದರೆ ನನಗೆ ಗೊತ್ತಿಲ್ಲ. ಮಾಕೋಡು ಗ್ರಾಮದಲ್ಲಿ ಸುಮಾರು 3000 ಜನಸಂಖ್ಯೆ ಇದ್ದು, ದಾಳಿ ಮಾಡಿದ್ದರೆ ಅಲ್ಲಿನ ಸಾರ್ವಜನಿಕರನ್ನು ಪಂಚರನ್ನಾಗಿ ಮಾಡಬಹುದಿತ್ತು, ಠಾಣೆಯಲ್ಲೇ ಮಹಜರ್

ತಯಾರಿಸಿದ್ದರಿಂದ ಮಾಕೋಡು ಗ್ರಾಮಸ್ಥರನ್ನು ಪಂಚರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತನನ್ನು ದಸ್ತಗಿರಿ ಮಾಡುವಾಗ ಬೆಳಿಗ್ಗೆ 6.30 ಗಂಟೆಯಾಗಿತ್ತು. ಆ ಸಮಯಕ್ಕೆ ಜನರು ಓಡಾಡುತ್ತಿರುತ್ತಾರೆ ಎಂದರೆ ಬೆರಣಿಕೆಯಷ್ಟು ಓಡಾಡುತ್ತಿರುತ್ತಾರೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಪಶ್ಚಿಮಕ್ಕೆ ಗಂಗೂರಿಗೆ ಹೋಗುವ ರಸ್ತೆ ಇದೆ. ಪೂರ್ವಕ್ಕೆ ನೆನಪಿಲ್ಲ. ದಕ್ಷಿಣಕ್ಕೆ ಉಪ್ಪಾರಗೇರಿಗೆ ಹೋಗುವ ರಸ್ತೆ, ಉತ್ತರಕ್ಕೆ ಹರವೆ ಕಲ್ಲಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ. ನಮ್ಮ ಸಿಬ್ಬಂದಿಗಳೇ ಚಕ್ಕುಬಂದಿಯನ್ನು ತಿಳಿಸಿದ್ದರು. ನಾನು ಸುಳ್ಳು ಚಕ್ಕುಬಂದಿಯನ್ನು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಕ್ಕುಬಂದಿ ಮಾಕೋಡು ಗ್ರಾಮದಲ್ಲಿಲ್ಲ ಎಂದರೆ ಸರಿಯಲ್ಲ. ನಾವು ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅಂಕಿಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್ಚಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**